ಶ್ರೀ ವಿ. ಆರ್. ನಾಯ್ಡು.—ಜನಗಳಿಂದ ಮನವಿ ಬಂದರೆ ಜಾಗ್ರತೆ ಅದನ್ನು ಪರಿತ್ಸೀಲನೆ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜನಗಳಿಂದ ಮನವಿ ಬಂದರೆ Corporationಗೆ ಕಳುಹಿಸಿ ಕೊಟ್ಟು ಅದನ್ನು consider ಮಾಡುವಹಾಗೆ ಹೇಳುತ್ತೇವೆ.

Sites for Government Servants in Vyalikaval

Q.—914. Sri N. HUCHMASTHYGOWDA (Huliyurdurga).—

Will the Government be pleased to state:—

(*a*) the number of Government servants that have requested for the grant of house building sites in Vyalikaval;

(*b*) of them the number that have deposited the amount;

(*c*) when the amounts were deposited;

(*d*) the arrangements made for the grant of sites to them?

A.—Sri T. CHANNIAH (Minister for Public Health and Local Self-Government).—

(*a*) 120.

(*b*) 44.

(*c*) 41 in 1951 and 3 during 1954.

(*d*) 60 sites allotted.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ದುಡ್ಡು ಕೊಟ್ಟಿರುವುದು ಕೋದಂಡರಾಮಪುರಂ Co-operative Society ಮುಖಾಂತರವಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೊಸೈಟಿಯವರು ಸೈಟು ವಿಂಗಡಿಸಿ ಕೊಡುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳದಿದ್ದರೆ Trust Board ಸೈಟನ್ನು ನೇರವಾಗಿ ವಿಂಗಡಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—Trust Board site ಗಳನ್ನು Layout ಮಾಡಿ ಅವರೇ ವಿಲೇವಾರಿ ಮಾಡಬೇಕೆಂಬುದಾಗಿ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೈಟುಗಳನ್ನು ಕೊಡುವಾಗ 120 ಜನರಿಗೆ ದುಡ್ಡು ಕೊಡದೆ ಇರುವುದಕ್ಕೆ ಸೊಸೈಟಿ ಮುಖಾಂತರ ಅಥವಾ Trust Board ಮುಖಾಂತರ ನೋಟೀಸ್ ಕೊಟ್ಟಿದೆಯೇ?

ಶ್ರೀ ಟಿ. ಚನ್ನಯ್ಯ.—60 ಜನರಿಗೆ ಸೈಟುಗಳನ್ನು ಕೊಡಬೇಕೆಂಬುದಾಗಿ ತೀರ್ಮಾನ ಮಾಡಿದವರ ಪೈಕಿ 44 ಮಂದಿ ಮಾತ್ರ ಹಣ ಕೊಟ್ಟಿದ್ದಾರೆ. ಬಾಕಿ ಜನ ಹಣ ಕೊಡದೆ ಇರುವುದರಿಂದ ಉಳಿದವರಿಗೆ ಸೈಟು ಕೊಡಲಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬಾಕಿ ದುಡ್ಡನ್ನು ಕೊಡುವುದಕ್ಕೆ ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—Trust Board ನವರು ಸೈಟ್ allotment ಮಾಡಿದ ತಕ್ಷಣ ದುಡ್ಡು ಕೊಡ ಬೇಕೆಂದು ನೋಟೀಸ್ ಕೊಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಉಳಿದಿರತಕ್ಕಂಥ ಒಟ್ಟು 120 ಜನರಿಗೂ ಒಂದೇ ಕಡೆ Colony ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಸೈಟುಗಳು ಅದೇ ಜಾಗದಲ್ಲಿ ಇದ್ದ ಪಕ್ಷದಲ್ಲಿ ಏರ್ಪಾಟು ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

Huliyur Village Panchayet (Conversion into Municipality)

Q.—923. Sri C. H. LINGADEVARU (Chiknaikanahalli).—

Will the Government be pleased to state:—

(*a*) since when the Village Panchayet and people of Huliyur, Chiknaikanahalli Taluk, have been asking for the conversion of the village into a municipality;

(*b*) whether correspondence is not going on in the matter;

(*c*) at what stage it is and where does it stand now?

A.—Sri T. CHANNIAH (Minister for Public Health and Local Self-Government).—

(*a*) Since December 1952.

(*b*) Yes,

(*c*) The receipt of information about the limits of the local area of the proposed Municipality called for from the Commissioner for Local Self-Government is awaited.

ಶ್ರೀ ಸಿ. ಎಚ್. ಲಿಂಗದೇವರು.—ಮೂರು ವರ್ಷಗಳಿಂದ ಸಾವಕಾಶವಾಗಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ರೆವಿನ್ಯೂ ಇಲಾಖೆಯವರು ಮತ್ತು L. S. G. Commissionerರವರು ಸ್ಥಳವನ್ನು ನೋಡಿ Area fix ಮಾಡಿ Town Municipal Council Limit ಎಷ್ಟು ಇರಬೇಕು ಎಂಬುದನ್ನು survey ಮಾಡಬೇಕು. ಎಷ್ಟು Area ಸೇರಿಸಿಕೊಳ್ಳಬೇಕು ಎಂಬ ವಿಷಯವನ್ನೆಲ್ಲಾ ಆಫೀಸರ್ ಅವರು ಮಾಡಬೇಕು. ರೆವಿನ್ಯೂ ಇಲಾಖೆಯವರು ಮಲೆನಾಡು ಎಷ್ಟು Area ಸೇರಿಸಬೇಕು ಎಂಬ ವಿಷಯದಲ್ಲಿ ಕಮಿಷನರ್ ಅವರಿಗೆ ಬರೆದಿದ್ದಾರೆ. ಅವರು ಅಲ್ಲಿ ಹೋಗಿ ಇಷ್ಟೇ Area ಸೇರಿಸಬೇಕು ಎಂದು limit fix ಮಾಡಬೇಕು. ಅವರು ಸ್ಥಳಕ್ಕೆ ಹೋಗಿ ಅವರಿಂದ ಸರ್ಕಾರಕ್ಕೆ ವರದಿ ಬಂದನಂತರ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಒಂದು ವಿಷಯದಲ್ಲಿ 1-1½ ವರ್ಷ ಕಾಗದ ಪತ್ರ ಕದಲದೆ ಕುಳಿತಿರುವುದು ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ನಿಧಾನವಾಗುವುದಕ್ಕೆ ಕಾರಣ ಏನೂ ಖಚಿತವಾಗಿ ಗೊತ್ತಾಗಲಿಲ್ಲ. ಆದರೆ ನಮಗೆ ವರದಿ ಬಂದಿರುವ ಪ್ರಕಾರ ಯಾವ ಏರಿಯಾ ತೆಗೆದು ಕೊಳ್ಳಬೇಕು ಎಂಬ ವಿಷಯದಲ್ಲಿ ಸಂಬಂಧಪಟ್ಟ ಇಲಾಖೆಯವರೊಡನೆ ಪತ್ರ ವ್ಯವಹಾರದಲ್ಲಿ ಸ್ವಲ್ಪ ನಿಧಾನವಾಗಿದೆ. ಆದ್ದರಿಂದ ಕಮಿಷನರ್ ಅವರು ಜಾಗ್ರತೆಯಾಗಿ ಇದನ್ನು ಮಾಡುತ್ತೇವೆಂದು ನಮಗೆ ವರದಿ ಕಳುಹಿಸಿದ್ದಾರೆ.

Short Term Credits from the Central Co-operative Banks (exemption in payment of fees for Encumbrance Certificates).

Q.—358. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether any representation is made to the Government to exempt registration fee and search fee to obtain encumbrance certificates to the applicants to the Central Co-operative Banks for short term loans ;

(*b*) the action taken in this behalf ?

A.—Dr. R. NAGAN GOWDA (Minister for Agriculture).—

(*a*) Yes.

(*b*) This is under consideration of Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಲ್ಪಕಾಲಾವಧಿ ಸಾಲಗಳನ್ನು ಪಡೆಯುವಾಗ ರೈತರಿಂದ encumbrance certificates ಮತ್ತು Registration fee ಮನ್ನಾ ಮಾಡುವುದಕ್ಕೆ ಬಂದ ಮನವಿಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ ಎಂದು ಹೇಳಿದ್ದೀರಿ. ಈ ವಿಷಯ ಇದೇ Assemblyಯಲ್ಲಿ ಹಿಂದಿನ ವರ್ಷವೂ ಕೂಡ ಪ್ರಶ್ನೆಗಳ ಮತ್ತು cut motions ಮೂಲಕ ಬಂದಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಬಂದಿತ್ತು. ಈಗ ಅನೇಕ Co-operative Societyಗಳು half fee for encumbrance certificate ಎಂಬ concession ಕೊಟ್ಟಿದ್ದಾರೆ. ಪೂರ್ತಿ ಕೊಡುವ ವಿಷಯ ಆಲೋಚನೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Half fee ಕೊಡುತ್ತಾ ಇರುವುದು Co-operative movement ಹುಟ್ಟಿದ ಲಾಗಾಯಿತು ಇದೆ. ಇದು ಈಚೆಗೆ ಬಂದಿದ್ದಲ್ಲ. ಈಚೆಗೆ half encumbrance ಮತ್ತು Registration feeಯನ್ನು ಪೂರ್ತಾ ಮನ್ನಾ ಮಾಡಬೇಕೆಂದು action ತೆಗೆದುಕೊಂಡಿದ್ದೀರಾ ? ಆ ಮನವಿ consider ಮಾಡಲು ಎಷ್ಟು ವರ್ಷ ಬೇಕಾಗುತ್ತದೆ ?

ಡಾ॥ ಆರ್. ನಾಗನಗೌಡ.—ಸರ್ಕಾರಕ್ಕೆ ಬರುವ ರೆವೆನ್ಯೂ ಬಹಳ ಕಡಿಮೆಯಾಗಿರುವುದರಿಂದ ಈ ಪ್ರಶ್ನೆಯನ್ನು ಸ್ವಲ್ಪ ಆಲೋಚನೆ ಮಾಡಬೇಕಾಗಿ ಬಂದಿದೆ. ಕೆಲವು Land Mortgage Banks, Rural Co-operative Societyಗಳು ಇವುಗಳ ವಿಚಾರದಲ್ಲಿ encumbrance certificatesಗಳನ್ನು ಪೂರ್ತಿ ಬಿಟ್ಟುಬಿಟ್ಟಿದ್ದೇವೆ. ಇದಕ್ಕೂ ಕೊಡಬೇಕಾಗಿಲ್ಲವೇ ಎಂಬ ವಿಚಾರದಲ್ಲಿ financial positionನ್ನು ಆಲೋಚನೆ ಮಾಡುತ್ತೇವೆ.

12-30 P.M.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಅಲ್ಪ ಕಾಲಾವಧಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಈ ರಿಯಾಯಿತಿ ತೋರಿಸುವುದರಿಂದ ಸರ್ಕಾರದವರಿಗೆ ಎಷ್ಟು ಹಣ ಲುಕ್ಸಾನಾಗುತ್ತದೆ ?

ಡಾ॥ ಆರ್. ನಾಗನಗೌಡ.—ಈಗ ಇದರಿಂದ financial commitment ಎಷ್ಟಾಗುತ್ತದೆಂದು calculate ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಇದರ ಕಾರ್ಯ ಚಟುವಟಿಕೆ increase ಆಗುತ್ತಿದೆ ; ಅರ್ಜಿಗಳೂ ಹೆಚ್ಚಾಗುತ್ತಿವೆ. ಆದ್ದರಿಂದ calculate ಮಾಡುವುದಕ್ಕಾಗುವುದಿಲ್ಲ. ಆದರೂ ಈ encumbrance certificateಗಳನ್ನು ತೆಗೆದುಕೊಳ್ಳುವುದರಲ್ಲಿ concession ಕೊಡುವ ವಿಷಯವನ್ನು ಸರ್ಕಾರದವರು active ಆಗಿ ಯೋಚನೆ ಮಾಡುತ್ತಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಸಹಾಯ ಮಾಡಬೇಕೆಂಬ ಒಂದು ಉದ್ದೇಶವಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Short Term Loan ಅವಧಿ ಒಂದು ವರ್ಷ ಮಾತ್ರ ಇರುವುದರಿಂದ ರೈತರಿಗೆ ಹೆಚ್ಚಿಗೆ ಸಾಲಗಳನ್ನು ಕೊಡಿಸಬೇಕು, ಅವರಿಗೆ ಉಪಕಾರ ಮಾಡಬೇಕು, ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕು ಎಂಬ ಉದ್ದೇಶವಿರುವಾಗ, ಈ ರೀತಿ ರೈತರಿಗೆ encumbrance certificateನ್ನು ತೆಗೆದು ಕೊಳ್ಳುವುದಕ್ಕೆ ನಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಲಂಚ ಮುಂತಾದುವನ್ನು ಕೊಡಬೇಕಾಗಿ ಬಂದು ಸಾಲಗಳು ನಲ್ಲಿಸಾಗಿ ದೊರೆಯುತ್ತಿಲ್ಲವೆಂಬುದು, ತಮ್ಮ ಉದ್ದೇಶ ನೆರವೇರುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದು ಗೊತ್ತಾಗಿದೆ. ಅದನ್ನು ಹೇಗೆ ಸರಿಪಡಿಸಬೇಕೆಂದು ತೀವ್ರವಾಗಿ ಆಲೋಚನೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Short term loan ಕೊಡುವ ಏರ್ಪಾಡು ಮಾಡಿದ್ದೀರಲ್ಲಾ, ಈ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಂಡ ಹಣಕ್ಕೆ ತಾವು ಕೊಡುವ ದರಕ್ಕೂ ಸೊಸೈಟಿಗೆ ತಾವು ಕೊಡುವ ದರಕ್ಕೂ ಶೇಕಡ ಎಷ್ಟರಷ್ಟು ತಮಗೆ ಹಣ ಉಳಿತಾಯವಾಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.— ಹಾಗೆ ಯಾವ ಆದಾಯವೂ ಸರ್ಕಾರಕ್ಕಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರಿಸರ್ವ್ ಬ್ಯಾಂಕಿನಿಂದ ನಿಮಗೆ ಎಷ್ಟು ಪರ್ಸೆಂಟಿಗೆ ಸಾಲ ಸಿಕ್ಕುತ್ತಿದೆ ; ನೀವು ಎಷ್ಟು ಪರ್ಸೆಂಟಿಗೆ ಕೊಡುತ್ತಿದ್ದೀರಿ ?

Mr. SPEAKER.—It does not arise. All that cannot be disclosed here.

Question Nos. 14, 231, 276, 333, 379 will be taken up together.